ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ದಕ್ಷಿಣ

ಜಯನಗರ ಪೂರ್ವ, ವಾರ್ಡ್ ಸಂಖ್ಯೆ: 170

ದಿನಾಂಕ 23.03.2022 ರಂದು ವಾರ್ಡ್ ನಂ.170, ಜಯನಗರ ಪೂರ್ವದಲ್ಲಿ ವಾರ್ಡ್ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಭೆ.

## ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀಮತಿ ಸಂಧ್ಯಾರಾಣಿ | ಅಧ್ಯಕ್ಷರು |
| 02 | ಶ್ರೀ ವಿಜಯ್ ಕುಮಾರ್ ಎಂ.ಬಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ನಾಗರಾಜು ಆರ್ | ಸಹಾಯಕ ಉಪನಿರೀಕ್ಷಕರು ಸಂಚಾರ ಪೋಲಿಸ್ಮೈ.ಲೇಔಟ್ |
| 04 | ಶ್ರೀ ಲಕ್ಷ್ಮಣ್ | ಎ.ಎಸ್.ಐ (ಕಾ ಮತ್ತು ಸು) ತಿಲಕನಗರ ಪೋಲಿಸ್ |
| 05 | ಡಾ॥ ಪ್ರಜ್ವಲ್ | ವೈದ್ಯರು |
| 06 | ಶ್ರೀ ಶರತ್ ಬಾಬು ಪಿ | ಹಿರಿಯ ಆರೋಗ್ಯ ಪರೀವಿಕ್ಷಕರು |
| 07 | ಶ್ರೀ ಗೌತಮ್ ವೈ | ಕಿರಿಯ ಆರೋಗ್ಯ ಪರೀವಿಕ್ಷಕರು (ಘನತ್ಯಾಜ್ಯ) |
| 08 | ಶ್ರೀ ಕವಿರಾಜ ಕೆ | ವಾರ್ಡ್ ಮಾರ್ಷಲ್ |
| 09 | ಶ್ರೀ ಗಂಗಾಧರ್ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯು.ಎಸ್.ಎಸ್.ಬಿ |
| 10 | ಶ್ರೀ ನಾರಯಣ ಸ್ವಾಮಿ ಇ | ಸ್ಯಾನಿಟರಿ ದಫೇಧಾರ್ (ಘನತ್ಯಾಜ್ಯ) |
| 11 | ಶ್ರೀ ಮುನಿರತ್ನ ವಿ | ಸ್ಥಳೀಯಾ ನಾಗರೀಕ ಎನ್.ಎ.ಎಲ್ ಲೇಔಟ್ |
| 12 | ಶ್ರೀ ಮನೋಹರ್ ಕೆ | ಸ್ಥಳೀಯಾ ನಾಗರೀಕ ಎನ್.ಎ.ಎಲ್ ಲೇಔಟ್ |
| 13 | ಶ್ರೀ ಉಮಾಶಂಕರ | ಸ್ಥಳೀಯಾ ನಾಗರೀಕ 9ನೇ ಬ್ಲಾಕ್ ಜಯನಗರ |
| 14 | ಶ್ರೀ ಝಾಕೀರ್ ಎಸ್.ಝಡ್ | ಸ್ಥಳೀಯ ನಾಗರೀಕ, 9ನೇ ಬ್ಲಾಕ್ ಜಯನಗರ |
| 15 | ಶ್ರೀಮತಿ ಭಾರತಿ ಗಿರೀಶ್ | ಸ್ಥಳೀಯಾ ನಾಗರೀಕ ಎನ್.ಎ.ಎಲ್ ಲೇಔಟ್ |
| 16 | ಶ್ರೀ ಚೇತನ್ ಎಸ್.ಎಂ | ಸ್ಥಳೀಯಾ ನಾಗರೀಕ 9ನೇ ಬ್ಲಾಕ್ ಜಯನಗರ |
| 17 | ಇತರ ಅಧಿಕಾರಿಗಳು ಮತ್ತು ವಾರ್ಡ್170 ರ ಸ್ಥಳೀಯ ನಾಗರೀಕರು ಜಯನಗರ | |

**ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಮಾನ್ಯ ಶಾಸಕರು ಜಯನಗರ ಮತ್ತು ಎಲ್ಲಾ ಸದಸ್ಯರು ಹಾಗೂ ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಿದರು**

1. 34ನೇ 'ಸಿ' ಅಡ್ಡರಸ್ತೆಯಿಂದ (ನ್ಯೂ ಉಡುಪಿ ಫುಡ್) ಹಾಗೂ ವಿಷ್ಣುವರ್ಧನ್ ಉದ್ಯಾನವನದ ಕಡೆಗೆ ಅಂದರೆ 3ನೇ ಅಡ್ಡರಸ್ತೆ, ಎನ್.ಎ.ಎಲ್ ಲೇಔಟ್‌ಗೆ ಹೋಗುವ ದಾರಿಯಲ್ಲಿ, ಈಸ್ಟ್ ಎಂಡ್ ಮುಖ್ಯರಸ್ತೆ

Scanned by CamScanner

ಇದ್ದು, ಇಲ್ಲಿ ರಸ್ತೆ ವಿಭಜಕ ಇರುತ್ತದೆ. ಇದರಿಂದ ವಯೋವೃದ್ದರುಗಳಿಗೆ ರಸ್ತೆ ದಾಟಲು ತೊಂದರೆಯಾಗಿರುತ್ತದೆ. ಆದುದರಿಂದ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರು ಸದರಿ ರಸ್ತೆಯಲ್ಲಿ ವಿಭಜಕ ದಾಟಿ ಪಾದಚಾರಿಗಳ ಸುರಕ್ಷಿತ ಓಡಾಟಕ್ಕಾಗಿ ವೈಜ್ಞಾನಿಕ ರಸ್ತೆಯ ಉಬ್ಬುಗಳನ್ನು (ಹೆಚ್.ಆರ್.ಪಿ.ಸಿ) ನಿರ್ಮಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

(ದೂರುದಾರರು: ಆರ್.ಡಬ್ಲ್ಯೂ.ಎ, ಎನ್.ಎ.ಎಲ್ ಲೇಔಟ್.)

2. ಜಲಭವನ ಮುಖ್ಯ ರಸ್ತೆಯ ವಸತಿ ನಿವೇಶನದಲ್ಲಿ ಅನಧಿಕೃತವಾಗಿ ಕಾರುಗಳ ವಾಟರ್ ಸರ್ವೀಸ್ ಸ್ಟೇಷನ್ ಹಾಗೂ ನೀರು ಸರಬರಾಜು ಮಾಡುತ್ತಿದ್ದು ಇದರಿಂದ ಎನ್.ಎ.ಎಲ್ ಲೇಔಟ್‌ನ ಬೋರ್‌ವೆಲ್‌ಗಳ ನೀರಿನ ಮಟ್ಟ ತಗ್ಗಿ ನೀರಿನ ಅಭಾವ ಹೆಚ್ಚಾಗಿರುತ್ತದೆ, ಈ ಸಂಬಂಧ ಸ್ಥಳ ಪರಿಶೀಲಿಸಿ ವರದಿ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.
(ದೂರುದಾರರು: ಆರ್.ಡಬ್ಲ್ಯೂ.ಎ, ಎನ್.ಎ.ಎಲ್ ಲೇಔಟ್. ಕ್ರಮ: ಸ.ಕಾ.ಅ (ದಪೂ–5) ಬಿ.ಡಬ್ಲ್ಯು.ಎಸ್.ಎಸ್.ಬಿ ಜಯನಗರ ಕ್ರಮ ವಹಿಸುವುದು)

3. ಜಲಭವನ ಮುಖ್ಯ ರಸ್ತೆಯ ಎರಡು ಬದಿಯಲ್ಲಿ ಅನಧಿಕೃತವಾಗಿ ವಾಹನಗಳು ನಿಲುಗಡೆ ಹಾಗೂ ರಸ್ತೆ ಬದಿಯಲ್ಲಿಯೇ ಮೊಬೈಲ್ ಕಾರ್ ಸರ್ವೀಸ್ ಸ್ಟೇಷನ್ ಮಾಡುತ್ತಿದ್ದು, ಇದರಿಂದ ಈ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಸಂಚಾರಿ ಪೋಲಿಸ್ ಠಾಣೆ ಮೈಕೋ ಲೇಔಟ್‌ರವರು ಅನಧಿಕೃತ ವಾಹನಗಳ ನಿಲುಗಡೆ ಮಾಡಿರುವುದನ್ನು ತೆರವಿಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.
(ದೂರುದಾರರು: ಆರ್.ಡಬ್ಲ್ಯೂ.ಎ, ಎನ್.ಎ.ಎಲ್ ಲೇಔಟ್. ಕ್ರಮ: ಇನ್ಸ್‌ಪೆಕ್ಟರ್ ಸಂಚಾರ ಪೋಲಿಸ್ ಮೈಕೋ ಲೇಔಟ್ ಕ್ರಮ ವಹಿಸುವುದು)

4. ಅರಸು ಕಾಲೋನಿಯಲ್ಲಿ ಅಳವಡಿಸಿರುವ ನೀರು ಸರಬರಾಜು ಮತ್ತು ಒಳಚರಂಡಿ ಪೈಪ್ ಲೈನ್ ತುಂಬಾ ಹಾಳಾಗಿದ್ದು ದುರಸ್ಥಿಪಡಿಸಬೇಕಾಗಿರುತ್ತದೆಂದು ಅರಸು ಕಾಲೋನಿಯ ನಿವಾಸಿಗಳು ಸಭೆಯಲ್ಲಿ ಕೋರಿರುತ್ತಾರೆ. (ಕ್ರಮ: ಸ.ಕಾ.ಅ (ದಪೂ–5) ಬಿ.ಡಬ್ಲ್ಯು.ಎಸ್.ಎಸ್.ಬಿ ಜಯನಗರ ಕ್ರಮ ವಹಿಸುವುದು)

5. 26ನೇ ಮುಖ್ಯ ರಸ್ತೆ, 41ನೇ ಅಡ್ಡ ರಸ್ತೆ 9ನೇ ಬ್ಲಾಕ್ ಜಯನಗರ ಅನ್ನಪೂರ್ಣ ಡಿರ್ಪಾಮೆಂಟಲ್ ಸ್ಟೋರ್ ಕಟ್ಟಡದ ಮಾಲೀಕರಾದ ಶ್ರೀ ಎಸ್ ಉಮಾಶಂಕರ ರವರು ತಮ್ಮ ಕಟ್ಟಡದ ಮುಂಭಾಗದಲ್ಲಿ ತಾತ್ಕಾಲಿಕ ತರಕಾರಿ ಬಂಡಿಗಳನ್ನು ಇಟ್ಟಿರುವುದರಿಂದ ವ್ಯಾಪರಕ್ಕೆ ತೊಂದರೆಯಾಗುತ್ತಿರುವುದಾಗಿ ದೂರು ನೀಡಿರುತ್ತಾರೆ. (ಕ್ರಮ ಸ.ಕಾ.ಅ (ಬಿ.ಬಿ.ಎಂ.ಪಿ) )

Scanned by CamScanner

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು, ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: ರಂದು ಬೆಳ್ಳಗೆ 10.30 ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು

ಕಾರ್ಯದರ್ಶಿ ಮತ್ತು ಸಂಚಾಲಕರು
ಹೆಸರು: ವಿಜಯ್ ಕುಮಾರ್ ಎಂ.ಬಿ
ಸಹಾಯಕ ಅಭಿಯಂತರರು

Scanned by CamScanner